ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 03.07.2024.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:**

ವಾದಿ ನನ್ನ ಅಕ್ಕನ ಮಗಳು ಹಾಗೂ ನನ್ನ ದೊಡ್ಡ ಮಗನಾದ ಮಲ್ಲಿಕಾರ್ಜುನ ರವರಿಗೆ ವಾದಿಯನ್ನು ತೆಗೆದುಕೊಂಡಿರುತ್ತೇನೆ. ನನ್ನ ಅಕ್ಕನ ಗಂಡನ ಹೆಸರು ಶಿವಶರಣಪ್ಪ ಇರುತ್ತದೆ. 1ನೇ ಪ್ರತಿವಾದಿ ಗಂಡ ಶಿವಶರಣಪ್ಪ ರವರಿಗೆ ನಾಲ್ಕು ಜನ ಅಣ್ಣ-ತಮ್ಮಂದಿರು ಅವರೇಂದರೇ, ಶಿವಶರಣಪ್ಪ, ನಾಗೇಂದ್ರಪ್ಪ, ಅಣ್ಣಾರಾವ್ ಹಾಗೂ ತೇಜಪ್ಪ ಇರುತ್ತಾರೆ. ಶಿವಶರಣಪ್ಪ ರವರಿಗೆ ಸಹೋದರಿಯಾದ ಶಾಂತಬಾಯಿ ಕೂಡಾ ಇದ್ದರು, ಆದರೆ ತಿರಿಕೊಂಡಿರುತ್ತಾರೆ. ಅವರಿಗೆ ಮಕ್ಕಳ ಇರುತ್ತಾರೆ. ಶಾಂತಬಾಯಿ ಮಕ್ಕಳು ಕೋಟನೂರು ಗ್ರಾಮದಲ್ಲಿ ಇರುತ್ತಾರೆ.

1ನೇ ಪ್ರತಿವಾದಿ ಗಂಡನ ಮನೆ ಆಸ್ತಿ ಮೂಲತಃ ಲಾಡ ಚಿಂಚೋಳಿಯಲ್ಲಿ ಇತ್ತು ಎಂದರೆ ಸರಿ. ಈಗಲೂ ಕೂಡಾ ಸದರಿ ಆಸ್ತಿ ಇದೆ ಎಂದರೆ ಸರಿ. ಸದರಿ ಆಸ್ತಿಗಳು ಹೊಲ ಮನೆ ಇರುತ್ತವೆ ಎಂದರೆ ಸರಿ. ಗುರುಬಸಪ್ಪ 1ನೇ ಪ್ರತಿವಾದಿ ಕುಟುಂಬಕ್ಕೆ ಹಿರಿಯರು ಎಂದರೆ ಸರಿ. ತಮ್ಮ ಮನೆಯ ಕಾರುಬಾರನ್ನು ಗುರುಬಸಪ್ಪ ರವರೇ ಮಾಡುತ್ತಿದ್ದರು ಎಂದರೆ ಸರಿ. ಗುರುಬಸಪ್ಪ ಇರುವ ಕಾಲಕ್ಕೆ ತಮ್ಮ ಹಿರಿಯರ ಆಸ್ತಿಗಳನ್ನು ಎಲ್ಲರಿಗೂ ಹಂಚಿಕೊಟ್ಟ ಮ್ಯೂಟೇಷನ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಹಂಚಿಕೊಟ್ಟ ಪ್ರಕಾರ ಅವರ-ಅವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಗುರುಬಸಪ್ಪಕ್ಕಿಂತ ಮುಂಚೆ ಆತನ ಮಗ ಶಿವಶರಣಪ್ಪ ತಿರಿಕೊಂಡಿರುತ್ತಾರೆ ಎಂದರೆ ಸರಿ. ಈ ರೀತಿ ಪಾಲು ಮಾಡಿಕೊಟ್ಟು ಸುಮಾರು 35 ವರ್ಷವಾಗಿದೆ ಎಂದರೆ ಸರಿ.

1 ನೇ ಪ್ರತಿವಾದಿ ಗಂಡ ಬಸ್ ಡ್ರೈವರ್ ಇದ್ದ ಎಂದರೆ ಸರಿ. ಕಲಬುರಗಿಯ ಮನೆ ಖರೀದಿ ಮಾಡಿ ಸುಮಾರು 25 ವರ್ಷವಾಗಿದೆ ಎಂದರೆ ಸರಿ. ಸದರಿ ಮನೆಯನ್ನು 1 ನೇ ಪ್ರತಿವಾದಿ ಗಂಡನೇ ಖರೀದಿಸಿದ್ದ ಎಂದರೆ ಸರಿ. ಶಿವಶರಣಪ್ಪ ತನಗೆ ಬಂದ ವೇತನದಿಂದ ಸದರಿ ಮನೆಯನ್ನು ಖರೀದಿಸಿದ್ದ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿನಲ್ಲಿ ರಜೀಸ್ಟರ ಮಾಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿನಲ್ಲಿ ಶಿವಶರಣಪ್ಪ ಕ್ರಯ ಪತ್ರ ಮಾಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಬಾವ ಶಿವಶರಣಪ್ಪ ಅಪಘಾತದಲ್ಲಿ ತಿರಿಕೊಂಡಿರುತ್ತಾರೆ, ಕಾರಣ 1 ನೇ ಪ್ರತಿವಾದಿ ಓಡಾಡಿ ತನ್ನ ಹೆಸರಿನಲ್ಲಿ ಖರೀದಿ ಪತ್ರ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ತದನಂತರ 1 ನೇ ಪ್ರತಿವಾದಿ ಸದರಿ ಕಲಬುರಗಿಯ ಮನೆಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದು ನೋಂದಣಿ ಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಮಾರಾಟದ ಹಣ ರೂ.15 ಲಕ್ಷ 1 ನೇ ಪ್ರತಿವಾದಿ ತೆಗೆದುಕೊಂಡಿರುತ್ತಾಳೆ ಎಂದರೆ ಸರಿ. ಸದರಿ ಮಾರಾಟ ಮಾಡಿದ ಬಗ್ಗೆ ಹಾಗೂ ಹಣ ಪಡೆದ ಬಗ್ಗೆ ವಾದಿಗೆ ಗೊತ್ತಿದೆ ಎಂದರೆ ಸರಿಯಲ್ಲ. ಈ ಕೇಸ್ ಮಾಡುವ ಸಲುವಾಗಿ ವಾದಿಗೆ ಆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಟಂ.4 ರ ದಾವಾ ಸ್ವತ್ತು 1 ನೇ ಪ್ರತಿವಾದಿಯ ಸಂಪೂರ್ಣ ಸ್ವಂತ ಆಸ್ತಿ ಇರುತ್ತದೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಬರೆದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ವಾದಿ ನನ್ನ ಸೊಸೆ ಇರುವ ಕಾರಣ ಅವಳಿಗೆ ಅನುಕೂಲವಾಗುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ,

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಪ್ರತಿವೊಂದು ವಾಕ್ಯವು ಕೂಡಾ ಸಂಪೂರ್ಣ ಶುದ್ಧ ಸುಳ್ಳು ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**